[Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 339/2023**

**..................................................Vs....................................**

ಸಾಕ್ಷಿದಾರನ ಹೆಸರು ಃ ದಾಮೋದರ ಕೆ.ಬಿ, ಪಿ.ಡಬ್ಲ್ಯೂಃ 9

ತಂದೆಯ ಹೆಸರುಃ ಕೆ. ಬಿ. ಕೃಷ್ಣ ಸಿ.ಡಬ್ಲ್ಯೂಃ 16

ಪ್ರಾಯ ಃ 58 ವರ್ಷ

ಉದ್ಯೋಗ ಃ ಪಿ ಎಸ್ ಐ ಹೆಜಮಾಡಿ

ವಾಸ ಃ ಕಾರ್ಕಳ

ದಿಃ 04.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು 2019 ರಿಂದ 2023 ರವರೆಗೆ ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ ಸಹಾಯಕ ಪೋಲಿಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02.10.2022 ರಂದು ಎರ್ಲಪಾಡಿ ಗ್ರಾಮದ ಜಾರ್ಕಳ ಜಂಕ್ಷನ್ ನಲ್ಲಿ ಕಾಳಿಕಾಂಭ ಜ್ಯುವೆಲ್ಲರ್ಸ್ ಎಂಬಲ್ಲಿಂದ ಬಂದ ಮಾಹಿತಿ ಆಧಾರದಲ್ಲಿ ಸ್ಥಳಕ್ಕೆ ಹೋಗಿ ಪಿರ್ಯಾದಿದಾರರಾದ ಗಣೇಶ್ ಅಚಾರ್ಯ ಎಂಬುವವರ ಲಿಖಿತ ಪಿರ್ಯಾದನ್ನು ಸ್ವಿಕರಿಸಿ ಪ್ರಕರಣ ದಾಖಲಿಸುವಂತೆ ಪಿಸಿ 16 ಸಿದ್ದರಾಯಪ್ಪ ರವರ ಮುಖಾಂತರ ಠಾಣೆಗೆ ಕಳುಹಿಸಿಕೊಟ್ಟು ಠಾಣ ಹೆಚ್ ಸಿ 2050 ರವರಲ್ಲಿ ಸದಾಶಿವ ಶೆಟ್ಟಿ ಎಂಬವರಲ್ಲಿ ಪ್ರಕರಣ ದಾಖಲಿಸುವಂತೆ ತಿಳಿಸಿರುತ್ತೇನೆ. ನಂತರ ಘಟನಾ ಸ್ಥಳದ ಮಹಜರನ್ನು ಸಾಕ್ಷಿದಾರರಾದ ಚಾಸಾ-8 ಮತ್ತು 9 ರವರ ಸಮಕ್ಷಮ ತಯಾರಿಸಿ ಘಟನಾ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಕಬ್ಬಿಣದ ಕಟ್ಟರ್ ಸ್ವಾಧೀನಪಡಿಸಿಕೊಂಡು ಘಟನಾ ಸ್ಥಳದ ಮತ್ತು ಸ್ವತ್ತಿನ ಛಾಯಚಿತ್ರ ತೆಗೆದು ನಂತರ ಚಾಸಾ-3 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಸ್ವತ್ತು ಪಟ್ಟಿ ಸಂ. 174/22 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ04.10.2022 ರಂದು ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ08.12.2022 ರಂದು ಉಡುಪಿ ಪ್ರಕರಣ ಕ್ರಮಾಂಕ 170/22 ರಲ್ಲಿ ಆರೋಪಿಯಾಗಿರುವ ಅವಿನಾಶ್ ಡ್ಸೋಗ್ರೆ ಎಂಬುವವರನ್ನು ಬಾಡಿ

ವಾರಂಟ್ ವರದಿ ಹೊರಡಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಮನವಿ ಪತ್ರ ಕಳುಹಿಸಿರುತ್ತೇನೆ. ದಿಃ10.12.2022 ರಂದು ಎರ್ಲಾಪಾಡಿ ಗ್ರಾಮ ಪಂಚಾಯತ್ ಗೆ ಘಟನಾ ಸ್ಥಳ ಯಾರಿಗೆ ಸೇರಿದ ಎಂಬ ಬಗ್ಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ದಿಃ20.12.2022 ರಂದು ಮಾನ್ಯ ನ್ಯಾಯಾಲಯದಿಂದ ಬಾಡಿ ವಾರಂಟ್ ನಲ್ಲಿ ಆರೋಪಿಯನ್ನು ಅಭಿರಕ್ಷೆಯಲ್ಲಿ ಕರೆದುಕೊಂಡು ಸದ್ರಿಯವರ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು ಆರೋಪಿ ತೋರಿಸಿದಂತೆ ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ಮಹಜರು ಬರೆದು ಸದ್ರಿ ಸ್ಥಳದಲ್ಲಿ ಆರೋಪಿ ತೋರಿಸಿಕೊಟ್ಟ ಜಖಂಗೊಂಡ 2 ಬೀಗವನ್ನು ಸ್ವಾಧೀನಪಡಿಸಿಕೊಂಡು ನಂತರ ಠಾಣೆಗೆ ಬಂದು ಸ್ವತ್ತು ಪಟ್ಟಿ ನಂ. 213/22 ರಂತೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೆನೆ. ನಂತರ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ21.12.2022 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಆರೋಪಿಯ ಕೃತ್ಯಕ್ಕೆ ಬಳಸಿದ ಕೆಎ-20-ಇಕೆ -3084 ನ್ನು ಆ್ಯಕ್ಟಿವಾ ಸ್ಕೂಟರ್ ನ ಬಿ ಎಕ್ಸ್ ಟ್ರಾಕ್ಟ್ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ದಿಃ 04.01.2023 ರಂದು ಸದ್ರಿ ಸ್ಕೂಟರಿನ ಮಾಲೀಕರಿಗೆ ನೋಟಿಸು ಜಾರಿ ಮಾಡಿರುತ್ತೇನೆ. ನಂತರ ಚಾಸಾ-7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ12.01.2023 ರಂದು ಎರ್ಲಾಪಾಡಿ ಗ್ರಾಮ ಪಂಚಾಯತ್ ನಿಂದ ನೀಡಿದ ದೃಡಪತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಕೆಎ-20-ಇಕೆ-3084 ಸ್ಕೂಟರಿನ ಬಿ ಎಕ್ಸ್ ಟ್ರಾಕ್ಟ್ ನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ ಉಡುಪಿ ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

ಸಾಕ್ಷಿಯು ನಿಪಿ-1, 2, 5, 9, 11 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-1(ಸಿ) , 2(ಡಿ), 5(ಸಿ), 9(ಬಿ), 11(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3, 4 , 6 ರಿಂದ 8 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ-1 ರಿಂದ 3 ಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರಃ</u> ಶ್ರೀ ಎಂ ಐ ಕೆ ವಕೀಲರು ಸಮಯವಕಾಶ ಕೋರಿದ್ದು ರೂ.1,000/- ಖರ್ಚಿನೊಂದಿಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ